# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1246 |
| ಸದಸ್ಯರ ಹೆಸರು | : | ಶ್ರೀ. ಬಸನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17–12–2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ–150ಎ ರಲ್ಲಿ ಸಿಂಧನೂರು ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಲಾಗಿರುವ ಸೇತುವೆ ನಿರ್ಮಾಣ ಕಾಮಗಾರಿಯು ಕಳಪೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಂಬಂಧ ಸರ್ಕಾರದಿಂದ ಯಾವ ಕ್ರಮ ವಹಿಸಲಾಗಿದೆ; | ರಾಷ್ಟ್ರೀಯ ಹೆದ್ದಾರಿ–150ಎ ರಲ್ಲಿ ಸಿಂಧನೂರ ಹಳ್ಳಕ್ಕೆ ಸಿಂಧನೂರು ಪಟ್ಟಣದಲ್ಲಿ ಅಡ್ಡಲಾಗಿ ನಿರ್ಮಿಸಲಾಗಿರುವ ಸೇತುವೆ ಕಾಮಗಾರಿಯು "Widening of Major Bridge at Ch. 171.601 (existing Ch. 172.310) on NH-150A Jewargi Chamarajnagar section in the state of Karnataka on EPC mode (Job No. NH-150A-KNT-2020-21-913)" ಕಾಮಗಾರಿಯನ್ನು ರೂ.21.73 ಕೋಟಿಗಳ ಮೊತ್ತಕ್ಕೆ ದಿನಾಂಕ:08.12.2020 ರಂದು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆಯಾಗಿರುತ್ತದೆ.<br><br>**ಗುತ್ತಿಗೆ ವಿವರಗಳು:**<br>• **ಗುತ್ತಿಗೆ ಮೊತ್ತ:** ರೂ.17.69 ಕೋಟಿ (ಪರಿಷ್ಕೃತ ಮೊತ್ತ ರೂ.18.46 ಕೋಟಿಗಳು.<br>• **ಗುತ್ತಿಗೆ ಅವಧಿ:** 22.11.2021 ರಿಂದ 21.11.2023 ರವರೆಗೆ (24 ತಿಂಗಳುಗಳು)<br>• **ಗುತ್ತಿಗೆದಾರರ ವಿವರ:** ಮೆ//ತ್ರಿಮೂರ್ತಿ ಕನ್ಸ್ಟ್ರಕ್ಷನ್ಸ್ ಸಾವಂತವಾಡಿ ಮಹಾರಾಷ್ಟ್ರ<br>• ಗುತ್ತಿಗೆದಾರರು ದಿನಾಂಕ: 21.11.2021 ರಂದು ಕಾಮಗಾರಿ ಪ್ರಾರಂಭಿಸಿದ್ದು, ದಿನಾಂಕ: 18.11.2023 ರಂತೆ 99.14% ರಷ್ಟು ಕಾಮಗಾರಿ ಪೂರ್ಣಗೊಳಿಸಿರುತ್ತಾರೆ. ಕೂಡು ರಸ್ತೆ ನಿರ್ಮಾಣವನ್ನು ಒಂದು ಬದಿಯಲ್ಲಿ ಪೂರ್ಣ 50 ಮೀ. ಉದ್ದಕ್ಕೆ ಪೂರ್ಣಗೊಳಿಸಲಾಗಿರುತ್ತದೆ. ಇನ್ನೊಂದು ಬದಿಯಲ್ಲಿ 50 ಮೀ. ಉದ್ದದ ಪೈಕಿ 40 ಮೀ. ಉದ್ದ ಪೂರ್ಣಗೊಳಿಸಿದ್ದು, ಬಾಕಿ 10 ಮೀ. ಉದ್ದದ ಕಾಮಗಾರಿಯನ್ನು ಮಾಡಿರುವುದಿಲ್ಲ. ಹಾಗೂ ರೋಡ್ ಫರ್ನಿಚರ್ಸ್ (ರೋಡ್ ಮಾರ್ಕಿಂಗ್ ಪೇಂಟ್, ಸ್ಟಡ್ಸ್, ಮೆಟಲ್ ಬೀಮ್ ಕ್ರ್ಯಾಶ್ ಬ್ಯಾರಿಯರ್ಸ್ ಮತ್ತು ಸೂಚನಾ ಫಲಕಗಳು ಇತ್ಯಾದಿ) ಗಳನ್ನು ಹೊರತುಪಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ.<br>• ಮೂಲತಃವಾಗಿ ಎರಡು ಬದಿಯ 100 ಮೀ. ಅಪ್ರೋಚ್ ರಸ್ತೆಯು paver ನಿಂದ ಕೂಡಿದ್ದಾಗಿದ್ದು ಇದೆ. ಪ್ರಸ್ತುತ ಪ್ರಸ್ತಾಪಿತ ಕಾಮಗಾರಿಯಲ್ಲಿ 90 ಮೀಟರ್ ಅಪ್ರೋಚ್ ರಸ್ತೆಗೆ ಡಾಂಬರೀಕರಣವಾಗಿದ್ದು, 10 ಮೀ ಕಾಮಗಾರಿ ನಿರ್ವಹಿಸದೆ ಇದ್ದು ಮೂಲತಃವಾಗಿದ್ದ paver ಹಾಗೆಯೇ ಉಳಿದಿದ್ದು ವಾಹನ ಸಂಚಾರಕ್ಕೆ ತಡೆಯಿರುವುದಿಲ್ಲ. |

| | | |
|---|---|---|
| | | • ಪರಿಷ್ಕೃತ ಗುತ್ತಿಗೆ ಮೊತ್ತವಾದ ರೂ.18.46 ಕೋಟಿಗಳ ಪೈಕಿ ರೂ.18.32 ಕೋಟಿಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದ್ದು ರೂ.14.79 ಲಕ್ಷಗಳು ಮೊತ್ತದ ಕಾಮಗಾರಿಯನ್ನು ನಿರ್ವಹಿಸುವುದು ಬಾಕಿ ಇರುತ್ತದೆ.<br>• ಸದರಿ ಕಾಮಗಾರಿಗೆ ಬಳಸಲಾದ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಗಳನ್ನು ಇಲಾಖಾ ಲ್ಯಾಬ್‌ಗಳಲ್ಲಿಯೇ ಮಾಡಿದ್ದು, ಪ್ರತಿ ಹಂತಗಳಲ್ಲಿಯೂ ಇಲಾಖೆಯ ಗುಣ ನಿಯಂತ್ರಣ ಪ್ರಾಧಿಕಾರ ಹಾಗೂ ಇಲಾಖಾ ಮೇಲಾಧಿಕಾರಿಗಳು ಕಾಮಗಾರಿಯನ್ನು ಪರಿವೀಕ್ಷಣೆ ಮಾಡಿರುತ್ತಾರೆ. ಈ ರೀತಿ ಹಂತ ಹಂತಗಳ ಕಾಮಗಾರಿಯು ಪ್ರಗತಿಯಲ್ಲಿರುವಾಗ ಇಲಾಖೆಯ ಮೇಲಾಧಿಕಾರಿಗಳು ಗುಣ ನಿಯಂತ್ರಣ ಪ್ರಾಧಿಕಾರ ಕಾಮಗಾರಿಯ ಪರಿವೀಕ್ಷಣೆಗೆ ಒಳಪಡಿಸುತ್ತಾ ಮೇಲಾಧಿಕಾರಿಗಳು ನೀಡಿದ ಎಲ್ಲಾ ನಿರ್ದೇಶನಗಳನ್ನು ಪಾಲಿಸುತ್ತಾ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ಇದಲ್ಲದೇ ಕಾಮಗಾರಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಕೇಂದ್ರ ಕಛೇರಿಯ MORTH ನ MIV (Mobile Inspection Vehicle) ಯೊಂದಿಗೆ ದಿನಾಂಕ:12.11.2025ರಂದು ಕಾಮಗಾರಿಯನ್ನು ಪರಿವೀಕ್ಷಿಸಿದ್ದು, ಕಾಮಗಾರಿಯು ಕಳಪೆಯಿಂದ ಕೂಡಿರುವ ಬಗ್ಗೆ ಎಲ್ಲಿಯೂ ಟಿಪ್ಪಣಿ ನಮೂದಿಸಿರುವುದಿಲ್ಲ.<br>• ಗುತ್ತಿಗೆ ಕರಾರಿನನ್ವಯ ಸೇತುವೆ ಕಾಮಗಾರಿಯು ಪೂರ್ಣಗೊಂಡ ದಿನಾಂಕದಿಂದ 10 ವರ್ಷಗಳವರೆಗೆ ಸದರಿ ಸೇತುವೆಯ ನಿರ್ವಹಣೆ ಜವಾಬ್ದಾರಿಯನ್ನು ಮೂಲ ಗುತ್ತಿಗೆದಾರರೇ ನಿರ್ವಹಿಸುತ್ತಾರೆ. |
| ಆ) | ಕಳಪೆ ಕಾಮಗಾರಿಗೆ ಹೊಣೆಗಾರರಾದ ಅಧಿಕಾರಿ/ ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮಕ್ಕಾಗಿ ಸರ್ಕಾರದಿಂದ ಶಿಫಾರಸ್ಸು ಮಾಡಲಾಗಿದೆಯೇ; ಇಲ್ಲವಾದಲ್ಲಿ, ಯಾವ ಕಾಲಮಿತಿಯೊಳಗೆ ಈ ಕುರಿತು ಸರ್ಕಾರದಿಂದ ಕ್ರಮವಹಿಸಲಾಗುವುದು? | ಮೇಲೆ ವಿವರಿಸಿದಂತೆ ಸೇತುವೆ ನಿರ್ಮಾಣ ಕಾಮಗಾರಿಯು ಎಲ್ಲಾ ಗುಣಮಟ್ಟದ ಅಂಶಗಳನ್ನು ಪೂರೈಸಿದ್ದು, ಈಗಾಗಲೇ ದಿನಾಂಕ: 18.11.2023 ರಿಂದ ಸೇತುವೆಯನ್ನು ಸಾರ್ವಜನಿಕ ಸೇವೆಗೆ ಮುಕ್ತಗೊಳಿಸಲಾಗಿದೆ.<br>ಸದರಿ ಕಾಮಗಾರಿಯು ಕಳಪೆಯಿಂದ ಕೂಡಿರುವುದಿಲ್ಲ. ಆದ್ದರಿಂದ ಅಧಿಕಾರಿ / ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಉದ್ಭವಿಸುವುದಿಲ್ಲ. |

ಸಂಖ್ಯೆ: ಲೋಇ 472 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು